## 4:6 ವಾಹನ ಖರೀದಿಗೆ ಬ್ಯಾಂಕಿನಿಂದ ನೇರ ಸಾಲ

| ಕ್ರ.ಸಂ | ವಿಷಯಗಳು | ನಿಯಮಗಳು |
|---|---|---|
| 1. | ಉದ್ದೇಶ (purpose) | 02 ಚಕ್ರದ/ ನಾಲ್ಕು ಚಕ್ರದ ವಾಹನವನ್ನು ಕೊಳ್ಳಲು ಗ್ರಾಹಕರಿಗೆ ಸಾಲ ಕೊಡುವುದು. |
| 2. | ಅರ್ಹತೆ (Eligibility) | ಸಾರ್ವಜನಿಕರು, ವೃತ್ತಿಪರರು, ವ್ಯಾಪಾರಸ್ಥರು, ಸರಕಾರಿ ಮತ್ತು ಅರೆ ಸರಕಾರಿ ಸಂಸ್ಥೆಗಳಲ್ಲಿ ಕೆಲಸ ಮಾಡುತ್ತಿರುವ ನೌಕರರು, ಸ್ವಂತ ಉದ್ಯೋಗಸ್ಥರು ಹಾಗೂ ವ್ಯವಸಾಯಗಾರರು-ವಾಹನ ಚಾಲನೆ ಲೈಸನ್ಸ ಪಡೆದಿರುವರು ಈ ಸಾಲ ಪಡೆಯಲು ಅರ್ಹರಾಗಿರುತ್ತಾರೆ. |
| 3. | ಸಾಲದ ಮಿತಿ (Quatam of loan) | ವಾಹನದ ಬೆಲೆ ಮಾರ್ಜಿನ್ ಕಳೆದು ನೊಂದವಣೆಯ ಫೀ, ಲೈಫ್ ಟೈಮ್ ತೆರಿಗೆ, ಹಾಗೂ ವಾಹನ ವಿಮೆಯ ಖರ್ಚನ್ನು ಸಾಲದ ಮಿತಿಯಲ್ಲಿ ಸೇರಿಸಬಹುದು. |
| 4 | ಮಂಜೂರಾತಿ ಮತು ಬಟವಾಡೆ (sanction & disbursement of loan) | ಮಂಜೂರು ಮಾಡಿದ ಸಾಲವನ್ನು ಮತ್ತು ಮಾರ್ಜಿನ್ ಹಣ ಸೇರಿಸಿ ಒಟ್ಟು ಮೊತ್ತವನ್ನು ನೇರವಾಗಿ ಸರಬರಾಜು ಮಾಡುವವರಿಗೆ ಡಿ.ಡಿ ಮುಖಾಂತರ ಬಟವಾಡೆ ಮಾಡಬೇಕು |
| 5. | ಮರುಪಾವತಿ (Repayment) | ಬಟವಾಡೆಯಾದ ಸಾಲವನ್ನು 3 ವರ್ಷದಿಂದ 5 ವರ್ಷಗಳಲ್ಲಿ ಸಮನಾದ ಮಾಸಿಕ ಕಂತುಗಳಲ್ಲಿ ಮರುಪಾವತಿ ಮಾಡಬೇಕು. |
| 6 | ಸಾಲದ ವಿಧಾನ (Nature of credit limit) | ಟರ್ಮ್ ಲೋನ್ |
| 7 | ಮಾರ್ಜಿನ್ ಮತ್ತು ಭದ್ರತೆ (Margin & security) | |

| ವರ್ಗ | ಮಿತಿ | ಮಾರ್ಜಿನ್ | ಭದ್ರತೆ |
|---|---|---|---|
| ಎಲ್ಲಾ ವರ್ಗದ ಸಾಲಗಾರರು | ರೂ.50,000/-ದವರೆಗೆ | 30% | 1. ಪ್ರಾಥಮಿಕ ಭದ್ರತೆ: ವಾಹನವನ್ನು ಬ್ಯಾಂಕಿಗೆ/ ಸಹಕಾರ ಸಂಘಕ್ಕೆ ಆಧಾರ ಮಾಡುವುದು.<br>2. ಸಹಕಾರಿಕ ಭದ್ರತೆ: ವೈಯಕ್ತಿಕ ಸ್ಥಿರಾಸ್ತಿ/ ಮೂರನೇ ವ್ಯಕ್ತಿಯ ಸ್ಥಿರಾಸ್ತಿ |
| ವೇತನ ಪಡೆದವರು | ರೂ.50,000/-ರದ ಮೇಲೆ ರೂ.5.00 ಲಕ್ಷ ದವರೆಗೆ | 30% | 1. ಪ್ರಾಥಮಿಕ ಭದ್ರತೆ: ವಾಹನವನ್ನು ಬ್ಯಾಂಕಿಗೆ/ ಸಹಕಾರ ಸಂಘಕ್ಕೆ ಆಧಾರ ಮಾಡುವುದು.<br>2. ಸಹಕಾರಿಕ ಭದ್ರತೆ: ವೈಯಕ್ತಿಕ ಸ್ಥಿರಾಸ್ತಿ/ ಮೂರನೇ ವ್ಯಕ್ತಿಯ ಸ್ಥಿರಾಸ್ತಿ |
| ಇತರ ಐಟಿ ಕಟ್ಟುವವರು | ರೂ.50,000/-ರದ ಮೇಲೆ ರೂ.5.00 ಲಕ್ಷ ದವರೆಗೆ | 30% | 1. ಪ್ರಾಥಮಿಕ ಭದ್ರತೆ: ವಾಹನವನ್ನು ಬ್ಯಾಂಕಿಗೆ/ ಸಹಕಾರ ಸಂಘಕ್ಕೆ ಆಧಾರ ಮಾಡುವುದು.<br>2. ಸಹಕಾರಿಕ ಭದ್ರತೆ: ವೈಯಕ್ತಿಕ ಸ್ಥಿರಾಸ್ತಿ/ ಮೂರನೇ ವ್ಯಕ್ತಿಯ ಸ್ಥಿರಾಸ್ತಿ |
| ಎಲ್ಲಾ ವರ್ಗದ ಸಾಲಗಾರರು | ರೂ.5.00 ಲಕ್ಷದ ಮೇಲೆ | 30% | 1. ಪ್ರಾಥಮಿಕ ಭದ್ರತೆ: ವಾಹನವನ್ನು ಬ್ಯಾಂಕಿಗೆ/ ಸಹಕಾರ ಸಂಘಕ್ಕೆ ಆಧಾರ ಮಾಡುವುದು.<br>2. ಸಹಕಾರಿಕಭದ್ರತೆ:(Collateral)-ಸ್ಥಿರ ಅಸ್ತಿಗಳ ಅಧಾರ.ಎನ್.ಎಸಿ-ಪ್ಲೆಡ್ಜ್ ಮಾಡುವುದು/ಎಲ್.ಐ.ಸಿ. ಪಾಲಿಸಿಗಳ ಅಧಾರ. |

| | | |
|---|---|---|
| 8 | ವಾಹನ ವಿಮೆ (Insurance) | ಕೊಂಡುಕೊಂಡ ವಾಹನವನ್ನು ಜನರಲ್ ವಿಮಾಕಂಪನಿಯಲ್ಲಿ ವಿಮೆಮಾಡಿಸಬೇಕು. ಈಗ ಪಡೆದಂತ ಪಾಲಿಸಿಯು ಸಾಲ ಸಂಪೂರ್ಣವಾಗಿ ಮರುಪಾವತಿಯಾಗುವವರೆಗೆ ಜಾರಿಯಲ್ಲಿ ಇರಬೇಕು. |
| 9 | ಕಾನೂನು (legal opinion) | ಎಲ್ಲೆಲ್ಲಿ ಸ್ಥಿರ ಅಸ್ತಿಗಳನ್ನು ಸಾಲಕ್ಕೆ ಅಧಾರವಾಗಿ ಕೊಡುತ್ತಾರೋ, ಅಂತಹ ಸಮಯದಲ್ಲಿ ಸದರಿ ಆಸ್ತಿಯ ಎಲ್ಲಾ ಕಾಗದ ಪತ್ರಗಳನ್ನು ಕಾನೂನು ತಜ್ಞರಿಗೆ ಅಂದರೆ ಬ್ಯಾಂಕಿನ ಪ್ಯಾನಲ್ ವಕೀಲರಿಗೆ ಕೊಟ್ಟು ಪರಿಶೀಲಿಸಬೇಕು. ಹಾಗೂ ಅವರ ಸಲಹೆಯನ್ನು ಪಡೆಯಬೇಕು. ಶಾಖಾ ವ್ಯವಸ್ಥಾಪಕರು ವಕೀಲರು ನೀಡಿದ ಒಪಿನಿಯನ್ ನನ್ನು ಕುಲಂಕುಶವಾಗಿ ಪರಿಶೀಲಿಸಿ ಸಂಬಂಧಪಟ್ಟ ಪ್ರಸ್ತಾವೆಗಳಿಗೆ ಸಾಲಗಾರರು/ ಜಾಮೀನುದಾರರ ಸಹಿ ಪಡೆಯಬೇಕು. |
| 10. | ಬಡ್ಡಿದರ (Interest Rate) | ಬಡ್ಡಿಯ ದರವು ಸರ್ಕಾರ/ರಿಜರ್ವ್ ಬ್ಯಾಂಕ್ ಆಫ್ ಇಂಡಿಯಾ/ನಬಾರ್ಡ/ಅಪೆಕ್ಸ್ ಬ್ಯಾಂಕ್ ಹಾಗೂ ಕೇಂದ್ರ ಕಛೇರಿಯ ಆದೇಶದಂತೆ ಇರುತ್ತದೆ. ಈ ಸಾಲಗಳಿಗೆ ತಿಂಗಳಿಗೊಮ್ಮೆ ಬಡ್ಡಿಯನ್ನು ವಿಧಿಸಬೇಕು. |
| 11. | ಇತರ ನಿಯಮಗಳು (Other ನಿಬಂಧ) | 1. ಸಾಲವನ್ನು ಹೊಸವಾಹನಗಳನ್ನು ಕೊಳ್ಳಲು ಮಾತ್ರ ಮಂಜೂರು ಮಾಡಬೇಕು.<br>2. ಸಾಲಗಾರನು ಚಲಾವಣೆಯುಳ್ಳ ಡ್ರೈವಿಂಗ್ ಲೈಸನ್ಸ ಹೊಂದಿರಬೇಕು.<br>3. ಬ್ಯಾಂಕಿನ ಚಾರ್ಜನ್ನು ಸಂಬಂಧ ಪಟ್ಟ ಆರ್.ಟಿ.ಓ ವಾಹನದ ಆರ್.ಸಿ ಪುಸ್ತಕದಲ್ಲಿ ನಮೂದಿಸಬೇಕು.<br>4. ಕೊಂಡು ಕೊಂಡ ವಾಹನವನ್ನು ಯಾವಗಲೂ ಉತ್ತಮ ಸ್ಥಿತಿಯಲ್ಲಿಡಬೇಕು.<br>5. ಪಡೆದ ಸಾಲವನ್ನು ಸಂಪೂರ್ಣವಾಗಿ ಮರುಪಾವತಿ ಮಾಡದೇ_ಮಾರಬಾರದು.<br>6. ವಾಹನದ ನೊಂದಣಿ ಮತ್ತು ಬ್ಯಾಂಕಿನ/ ಸಹಕಾರ ಸಂಘದ ಚಾರ್ಜನು ಸಾಲ ಬಿಡುಗೆಡಯಾದ ನಾಲ್ಕುವಾರದಲ್ಲಿ ಮಾಡಿಸಬೇಕು.<br>7. ವೇತನದಾರರು ಮತ್ತು ಮಾಸಿಕ ವೇತನದಲ್ಲಿ ಸಾಲದ ಕಂತನ್ನು ಮುರಿದು ಬ್ಯಾಂಕಿಗೆ/ ಸಹಕಾರ ಸಂಘಕ್ಕೆ ಕಳುಹಿಸುವಂತೆ ತಮ್ಮ ವೇತನ ಬಟವಾಡೆ ಅಧಿಕಾರಿಯಿಂದ ಬದಲಾಯಿಸಲಾಗದಂತ ಅಧಿಕಾರ ಪತ್ರವನ್ನು ಪಡೆದು ಬ್ಯಾಂಕಿಗೆ ಕೊಡುವುದು.<br>8. ಸ್ವಂತ ಉದ್ಯೋಗಸ್ಥರು ಹಾಗೂ ವೃತ್ತಿಪರರಿಂದ ಆಧಾಯ ತೆರಿಗೆ ಪಾವತಿಸಿದ/ಸಲ್ಲಿಸಿದ ತಃಖ್ತೆಯನ್ನು ಕಡ್ಡಾಯವಾಗಿ ಪಡೆಯಬೇಕು<br>9. ಎಲ್ಲಿ ಸಾಲಕ್ಕೆ ಎಲ್.ಐ.ಸಿ, ಪಾಲಿಸಿಯನ್ನು ಅಧಾರವಗಿ ಪಡೆಯಲಾಗಿದೆಯೋ ಆಂತ ಪಾಲಿಸಿಯನ್ನು ಇತ್ತೀಚಿನ ವಿಮೆ ಪಾವತಿ ಮಾಡಿದ ರಸೀದಿಯನ್ನು ಪಡೆದು ಪ್ರಸ್ತಾವೆಗಳ ಜೊತೆ ಇಡತಕ್ಕದ್ದು. |
| 12 | ತೆಗೆದು ಕೊಳಬೇಕಾದ ದಾಖಲೆಗಳು (Document to be obtained) | 1. ವಾಹನ ಸಾಲಕ್ಕೆ ಅರ್ಜಿ, ಸಂದರ್ಶನ, ಮೌಲ್ಯ ಮಾಪನ ಮತ್ತು ಪ್ರಸ್ತಾವೆ (MCDCCB-0033)<br>2. ವಾಹನ ಸಾಲದ ಮಂಜೂರಾತಿಯ ಷರತ್ತುಗಳು ಮತ್ತು ನಿಬಂಧನೆಗಳು. (MCDCCB-0034)<br>3. ವಾಹನ ಸಾಲದ ಜ್ಞಾಪಕ ಒಪ್ಪಂದ ಪತ್ರ (Memorandum of Agreement) (MCDCCB-0036)<br>4. ವಾಹನ ಸಾಲದ ಒಪ್ಪಂದ ಪತ್ರ (Agreement for Vehicle loan) (MCDCCB-0081)<br>5. ಜಾಮೀನು ಒಪ್ಪಂದ (Guarantee Agreement), (MCDCCB-0032)<br>6. ವಾಹನ ಸಾಲದ ಡಿ.ಪಿ.ಎನ್ & ಡಿ.ಪಿ. ಡೆಲಿವರಿ ಪತ್ರ (D.P.N & D.P Delivery Letter for Vehicle Loan) (MCDCCB-0035)<br>7. ಆರ್.ಟಿ.ಓ ನಮೂನೆ ಸಂಖ್ಯೆ 29 ಮತ್ತು 30 (ದ್ವಿ ಪ್ರತಿಯಲ್ಲಿ) ತಾರೀಕು ಹಾಕಬಾರದು.<br>8. ಒಂದು ಲಕ್ಷಕಿಂತ ಹೆಚ್ಚು ಮಿತಿಯುಳ್ಳ ಸಾಲಗಳಿಗೆ ಸ್ಥಿರ ಅಸ್ತಿಯನ್ನು ಆಧಾರವಾಗಿ ತೆಗೆದುಕೊಳ್ಳಲಾಗುತ್ತದೆ ಅಂತಹ ಸಂದರ್ಭದಲ್ಲಿ ಅಡಮಾನ ಪತ್ರವನ್ನು ಸಂಭಂದಪಟ್ಟ ಉಪನೊಂದಣಾಧಿಕಾರಿಯಲ್ಲಿ ನೊಂದಾಯಿಸಬೇಕು. (MCDCCB-0006) |

| | | |
|---|---|---|
| | | 9. **ಈ ಕೆಳಕಂಡ ಮುಖ್ಯ ಕಾಗದ ಪತ್ರಗಳನ್ನು ಪಡೆದು ಸಾಲದ ಪ್ರಸ್ತಾವೆಯ ಜೊತೆಯಲ್ಲಿಡಬೇಕು.**<br>a. ಹಣ ಸಂದ ರಶೀದಿ, ಡೆಲಿವರಿ ಪತ್ರ, ವಾಹನದ ಡುಪ್ಲಿಕೇಟ್ ಸೆಟ್ ಕೀಗಳು<br>b. ನೋಂದಾಯಿತ ವಾಹನದ ಆರ್.ಸಿ. ಪುಸ್ತಕದ ಪ್ರತಿಯನ್ನು ನಿಜ ಪ್ರತಿಯೊಡನೆ ಪರಿಶೀಲಿಸಿ ಶಾಖೆಯ ವ್ಯವಸ್ಥಾಪಕರು ದೃಢೀಕರಿಸಿ ಸಹಿಮಾಡಿ ಶಾಖೆಯ ಸೀಲ್ ಹಾಕಿ ವಾಹನ ಸಾಲದ ಪ್ರಸ್ತಾವೆಯ ಜೊತೆಯಿಡಬೇಕು.<br>c. ಬ್ಯಾಂಕಿನ ಹೆಸರನ್ನು ವಾಹನಗಳ ಪ್ರಮುಖ ಭಾಗದಲ್ಲಿ ಬರೆಯಿಸಬೇಕು. |
| 13 | ಉತ್ಪನ್ನ ಸಂಕೇತ (Product Code) | TL-(VL) |